# DAY & DATE: THURSDAY, SEPTEMBER 17th, 2026

## Matter: Inauguration of First Year B.E. Classes, 2026

**As appeared in the Newspapers:**

**VIJAYA KARNATAKA**
(Namma Bengaluru, Page No. 10)

# ‘ಕಠಿಣ ಪರಿಶ್ರಮದಿಂದ ಯಶಸ್ವಿ ಜೀವನ’




**ಬೆಂಗಳೂರು:** ವಿದ್ಯಾರ್ಥಿಗಳು ಹಠ, ಸಾಧಿಸುವ ಛಲ ಹಾಗೂ ಕಠಿಣ ಪರಿಶ್ರಮ ರೂಢಿಸಿಕೊಂಡಲ್ಲಿ ಜೀವನದಲ್ಲಿ ಯಶಸ್ಸು ಕಾಣಬಹುದು ಎಂದು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಹೇಳಿದರು. ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್‌ಎಂಐಟಿ) ವತಿಯಿಂದ ಬುಧವಾರ ಆಯೋಜಿಸಿದ್ದ ಮೊದಲ ವರ್ಷದ ಎಂಜಿನಿಯರಿಂಗ್ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ‘‘ವಿದ್ಯಾರ್ಥಿಗಳು ಆಕರ್ಷಣೆಗಳಿಗೆ ಒಳಗಾಗುವುದು ಸಹಜ. ಆದರೆ, ಆಕರ್ಷಣೆಗಳು ಜೀವನದಲ್ಲಿ ತಾತ್ಕಾಲಿಕವೇ ಹೊರತು, ಶಾಶ್ವತವಲ್ಲ, ಹೀಗಾಗಿ ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಕಾಣುವುದಕ್ಕೆ ಪ್ರಯತ್ನಿಸಬೇಕು,’’ ಎಂದರು. ಕಾರ್ಯಕ್ರಮದಲ್ಲಿ ಬಿಎನ್ ಎಂಐಟಿ ಆಡಳಿತ ಮಂಡಳಿ ಅಧ್ಯಕ್ಷ ನಾರಾಯಣರಾವ್ ಆರ್. ಮಾನೆ, ಉಪಾಧ್ಯಕ್ಷ ಅಶೋಕ್ ಆರ್.ಮಾನೆ, ಪ್ರಾಂಶುಪಾಲ ಡಾ. ಎಸ್.ವೈ.ಕುಲಕರ್ಣಿ, ಡೀನ್ ಈಶ್ವರ್ ಎನ್.ಮಾನೆ, ನಿರ್ದೇಶಕ ಪ್ರೊ. ಟಿ.ಜೆ.ರಾಮಮೂರ್ತಿ, ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.